**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ಸಂಖ್ಯೆ: 117/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : ತಿಮ್ಮಪ್ಪ | ಪಿ.ಡಬ್ಲ್ಯೂ. | 14 |
| ತಂದೆಯ ಹೆಸರು | : ಲೇಸಗಣಪ್ಪ | ಸಿ.ಡಬ್ಲ್ಯೂ. | 19 |
| ವಯಸ್ಸು | : 45 ವರ್ಷ | | |
| ಉದ್ಯೋಗ | : ಎ.ಎಸ್.ಐ, ಮೂಡಿಗೆರೆ ಪೋಲೀಸ್ ಠಾಣೆ | | |
| ವಾಸಸ್ಥಳ | : ಮೂಡಿಗೆರೆ | | |

ದಿ: *30-05-2023* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ನಾನು ದಿ: *22.06.2019* ರಿಂದ *03.11.2019* ರವರೆಗೆ ಮೂಡಿಗೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: *25.05.2019* ರಂದು ಮೂಡಿಗೆರೆ ಪೋಲೀಸ್ ಠಾಣೆಯಲ್ಲಿರುವಾಗ ಚಾಸಾ.*25* ರವರು ನನಗೆ, ಚಾಸಾ.*18, 20* ರಿಂದ *22* ರವನ್ನು ಕರೆದು ಈ ಪ್ರಕರಣದ ಏಳು ಆರೋಪಿಗಳಾದ ವಿನಯ್, ವಿಜಯಕುಮಾರ, ಕೃಷ್ಣಪ್ಪ, ಚಂದುಪೂಜಾರಿ, ರಾಜೇಶ್, ಸಂಕೇತ ಮತ್ತು ಮಧು ಯಾನೆ ವಿಶ್ವನಾಥ ರವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನಂತರ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಸದರಿಯವರುಗಳನ್ನು ಚಿಕ್ಕಮಗಳೂರು ಕಾರಾಗೃಹಕ್ಕೆ ತಲುಪಿಸಿರುತ್ತೇವೆ.

3. ನಂತರ ದಿ: *01.07.2019* ರಂದು ಚಾಸಾ.*25* ರವರ ಆದೇಶದ ಮೇರೆಗೆ ಚಾಸಾ.*13*

ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಯು.ಹೆಚ್.ಎಂ. ವಕೀಲರಿಂದಃ</u>

*4.* ದಿಃ *25.05.2019* ರಂದು ಮೂಡಿಗೆರೆ ಪೋಲೀಸ್ ಠಾಣೆಯಲ್ಲಿರುವಾಗ ಚಾಸಾ.*25* ರವರು ನನಗೆ, ಚಾಸಾ.*18, 20* ರಿಂದ *22* ರವನ್ನು ಕರೆದು ಈ ಪ್ರಕರಣದ ಏಳು ಆರೋಪಿಗಳಾದ ವಿನಯ್, ವಿಜಯಕುಮಾರ, ಕೃಷ್ಣಪ್ಪ, ಚಂದುಪೂಜಾರಿ, ರಾಜೇಶ್, ಸಂಕೇತ ಮತ್ತು ಮಧು ಯಾನೆ ವಿಶ್ವನಾಥ ರವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನಂತರ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಸದರಿಯವರುಗಳನ್ನು ಚಿಕ್ಕಮಗಳೂರು ಕಾರಾಗೃಹಕ್ಕೆ ತಲುಪಿಸಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

*5.* ನಂತರ ದಿಃ *01.07.2019* ರಂದು ಚಾಸಾ.*25* ರವರ ಆದೇಶದ ಮೇರೆಗೆ ಚಾಸಾ.*13* ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

(ಬಿ.ಪುಷ್ಪಾಂಜಲಿ)
*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.